## ಎವರ್‌ಗ್ರೀನ್ ಟ್ರೆಂಡ್

# ಕಾಟನ್ ಸಿಲ್ಕ್ ಸೀರೆ

**ಬೇಸಿಗೆ ಕಾಲಕ್ಕೆ ಹಿತವೆನಿಸುವ, ಹಗುರವಾದ ಕಾಟನ್ ಹಾಗೂ ಕಾಟನ್ ಸಿಲ್ಕ್ ಸೀರೆಗಳು ಇಂದು ಮಹಿಳೆಯರ ಮನಗೆದ್ದಿದ್ದು ಫ್ಯಾಷನ್ ಟ್ರೆಂಡ್ ಸೃಷ್ಟಿಸಿವೆ.**

**■ ಉಮಾ ವೇಣೂರು**



ಫ್ಯಾಷನ್ ಜಗತ್ತಿನಲ್ಲಿ 'ಎವರ್‌ಗ್ರೀನ್' ಟ್ರೆಂಡ್ ಸೃಷ್ಟಿಸಿದ ಉಡುಪುಗಳಲ್ಲಿ ಎಂದಿಗೂ ಸೀರೆಗೇ ಅಗ್ರಮಣೆ. ಸೀರೆಯಲ್ಲೂ ಹತ್ತಾರು ವೈವಿಧ್ಯಗಳಿದ್ದರೂ ರಾಣಿಯಂತೆ ಮೆರೆಯುತ್ತಿರುವುದು ರೇಷ್ಮೆ ಸೀರೆಯೇ. ಆದರೆ ಇದೀಗ ರೇಷ್ಮೆ ಸೀರೆಯನ್ನೂ ಕೊಂಚ ಬದಿಗೆ ಸರಿಸಿ ಕಾಟನ್ ಸಿಲ್ಕ್ ಸೀರೆಗಳು ಮೇಲ್ಪಂಕ್ತಿ ಹಾಕುತ್ತಿವೆ. ರೇಷ್ಮೆ ಸೀರೆಯ ಲುಕ್ ಅನ್ನೇ ಕೊಡುವ ಆದರೆ ಅದಕ್ಕಿಂತಲೂ ಹಗುರವಾದ ವೈವಿಧ್ಯಮಯ ಕಾಟನ್ ಸಿಲ್ಕ್ ಸೀರೆಗಳು ಈಗ ಫ್ಯಾಷನ್ ಟ್ರೆಂಡ್ ಎನಿಸಿವೆ.

ಕಾಟನ್ ಸಿಲ್ಕ್ ಸೀರೆ ಜೊತೆಗೆ ಈ ಕಾಲಮಾನಕ್ಕೆ ಸೂಕ್ತವೆನಿಸುವ ಕಾಟನ್ ಸೀರೆಗಳು ಇಂದು ಹೆಣ್ಣುಮಕ್ಕಳ ಮೊದಲ ಆಯ್ಕೆ ಎನಿಸಿದೆ. ಕಾಟನ್ ಸೀರೆ ಉಟ್ಟಾಗ ನೀಟ್ ಲುಕ್ ಕೊಡುತ್ತದೆ. ಕಾಟನ್ ಸೀರೆಗಳು ಸರಳ ಎನಿಸಿದರೂ ಉಟ್ಟುಕೊಂಡಾಗ ಚೆನ್ನಾಗಿ ಕಾಣಿಸುತ್ತದೆ. ಬೇಸಿಗೆ ಕಾಲಕ್ಕೆ ಸೂಕ್ತವಾದ ಸೀರೆ ಇದು.

ಹಿಂದೆಲ್ಲ ವಯಸ್ಸಾದವರು ಕಾಟನ್ ಸೀರೆ ಉಡುತ್ತಿದ್ದರು. ಆದರೆ ಈಗ ಎಲ್ಲ ವಯೋಮಾನದವರನ್ನೂ ಕಾಟನ್ ಸೀರೆ ಆಕರ್ಷಿಸುತ್ತಿದೆ. ದೇಹಕ್ಕೆ ಹಿತ, ಹಗುರ, ಸಿಂಪಲ್ ಹಾಗೂ ಮನಸ್ಸಿಗೆ ಆನಂದ ನೀಡುವ ಕಾಟನ್ ಸೀರೆಗಳು ಜನಪ್ರಿಯತೆಯ ಹಾದಿ ಹಿಡಿದಿದೆ.

ಉದ್ಯೋಗಸ್ಥ ಮಹಿಳೆಯರು ಇಷ್ಟಪಡುವುದು ಕಾಟನ್ ಸೀರೆಗಳನ್ನೇ. ನಿತ್ಯದ ದಿನಗಳಲ್ಲಿ ಕಚೇರಿಗೆ ಹೋಗುವಾಗ ಸಿಂಪಲ್ ಕಾಟನ್ ಸೀರೆ ಸಾಕು. ಸಣ್ಣಪುಟ್ಟ ಸಮಾರಂಭಗಳಿಗೆ ಉಡಲು ಸ್ವಲ್ಪ ಗ್ರ್ಯಾಂಡ್ ಅನಿಸಿರುವ ಸೀರೆಯಂಚಿಗೆ ಸಣ್ಣ ಜರಿ ಬಾರ್ಡರ್ ಇರುವ ಸೀರೆ ಇದೆ. ಇನ್ನು ಶುಭ